# KUVEMPU UNIVERSITY

## SAHYADRI SCIENCE COLLEGE, SHIMOGA – 577 203
**(Constituent Autonomous College of Kuvempu University)**

## ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಶಿವಮೊಗ್ಗ – 577 203

Phone: 08182-240435; 240260 Fax: 08182-240138 e-mail: sscautcontroller@gmail.com web: www.sahyadriscienceollege.org

**ಸಂಖ್ಯೆ:** ಕುವಿ/ಸವಿಕಾಶಿ(ಸ್ವಾ)/ಪವಿ/091/2014-15 **ಪರೀಕ್ಷಾ ನಿಯಂತ್ರಣಾಧಿಕಾರಿಗಳ ಕಾರ್ಯಾಲಯ,**

**ಅಡಕ:** **ದಿನಾಂಕ::** 26-09-2014

## ಪರೀಕ್ಷಾ ಪ್ರಕಟಣೆ

**ವಿಷಯ : ನವಂಬರ್/ಡಿಸೆಂಬರ್-2014 ರಲ್ಲಿ ನಡೆ ಯುವ B.Sc/B.C.A/B.Sc(Hons)/ M.Sc (Honours)/ BTTM/M.T.A., ಪದವಿ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಪಾವತಿಸುವ ಕುರಿತು.**

– 0 –

ಸಹ್ಯಾದ್ರಿ ವಿಜ್ಞಾನ ಸ್ವಾಯತ್ತ ಕಾಲೇಜಿನ ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿಯ ಪ್ರಾಯೋಗಿಕ ಪರೀಕ್ಷೆಗಳು **ದಿ:31-10-2014** ರಿಂದ ಹಾಗೂ ಲಿಖಿತ ಪರೀಕ್ಷೆಗಳು **ದಿ:20-11-2014** ರಿಂದ ಪ್ರಾರಂಭವಾಗುತ್ತದೆ. ವಿವರವಾದ ವೇಳಾಪಟ್ಟಿಯನ್ನು ಪ್ರಕಟಣೆಯೊಂದಿಗೆ ಲಗತ್ತಿಸಲಾಗಿದೆ.

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು **ಆನ್‌ಲೈನ್ ಮುಖಾಂತರ** ಪರೀಕ್ಷಾ ಅರ್ಜಿಗಳನ್ನು ಭರ್ತಿಮಾಡಿ ನಿಗದಿತ ದಿನಾಂಕದೊಳಗೆ ಶುಲ್ಕ ಸಂದಾಯ ಮಾಡಿ ಕಾಲೇಜಿನ ಪ್ರಾಂಶುಪಾಲರ ಮೂಲಕ ಪರೀಕ್ಷಾ ನಿಯಂತ್ರಾಣಾಧಿಕಾರಿಗಳಿಗೆ ಸಲ್ಲಿಸಲು ತಿಳಿಸಲಾಗಿದೆ.

**ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು :**

| | | |
|---|---|---|
| 01. | **ದಂಡ ಶುಲ್ಕವಿಲ್ಲದೆ** | 27-09-2014 **ರಿಂದ** 15-10-2014 **ರ ವರೆಗೆ** |
| 02. | **ದಂಡ ಶುಲ್ಕ ರೂ.100=00ರಂತೆ** | 16-10-2014 **ರಿಂದ** 20-10-2014 **ರ ವರೆಗೆ** |
| 03. | **ದಂಡ ಶುಲ್ಕ ರೂ.500=00ರಂತೆ** | 21-10-2014 **ರಿಂದ** 25-10-2014 **ರ ವರೆಗೆ** |

| ವಿವರ | **B.Sc** 1,2,3,4,5, ಮತ್ತು 6ನೇ ಸೆಮಿಸ್ಟರ್ (ಪ್ರತಿ ಸೆಮಿಸ್ಟರ್ ಗಳಿಗೆ ಪ್ರತ್ಯೇಕವಾಗಿ) | **B C A/BTTM** 1,2,3,4,5, ಮತ್ತು 6ನೇ ಸೆಮಿಸ್ಟರ್ (ಪ್ರತಿ ಸೆಮಿಸ್ಟರ್ ಗಳಿಗೆ ಪ್ರತ್ಯೇಕವಾಗಿ) |
|---|---|---|
| ಪ್ರತಿ ಥಿಯರಿಪತ್ರಿಕೆಗೆ ಪ್ರತ್ಯೇಕವಾಗಿ (ಪ್ರತಿ ಸೆಮಿಸ್ಟರ್‌ನ ಎಲ್ಲಾ ಪತ್ರಿಕೆಗಳಿಗೆ) | **ರೂ. 105/-** | **ರೂ. 125/-** |
| ಪ್ರತಿ ಪ್ರಾಯೋಗಿಕ ಪತ್ರಿಕೆಗೆ | **ರೂ.70/-** | **ರೂ.70/-** |
| **ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ)** | **ರೂ.125/-** | **ರೂ.125/-** |
| ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.465/- ಮೀರದಂತೆ (ಪ್ರತಿ ಸೆಮಿಸ್ಟರ್‌ಗಳಿಗೆ ಪ್ರತ್ಯೇಕವಾಗಿ) | ರೂ.700/- ಮೀರದಂತೆ (ಪ್ರತಿ ಸೆಮಿಸ್ಟರ್‌ಗಳಿಗೆ ಪ್ರತ್ಯೇಕವಾಗಿ) |

**Integrated B.Sc/ M.Sc(Honours)/M.T.A.,**

| | | **ಪರೀಕ್ಷಾ ಶುಲ್ಕ** | **ಅಂಕಪಟ್ಟಿ ಶುಲ್ಕ** | **ಒಟ್ಟು ಶುಲ್ಕ** |
|---|---|---|---|---|
| 1) | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ (ಪ್ರತ್ಯೇಕವಾಗಿ) | ರೂ. 1160/- | ರೂ. 125/- | **ರೂ. 1285/-** |
| 2) | ಯಾವುದೇ ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ) (ಪ್ರತಿ ಸೆಮಿಸ್ಟರ್ ಪ್ರತ್ಯೇಕವಾಗಿ) | ರೂ. 230/- | ರೂ. 125/- | **ರೂ. 355/-** |
| 3) | ಯಾವುದೇ ಸೆಮಿಸ್ಟರ್‌ನ ಒಂದು ಪ್ರಾಯೋಗಿಕ ಪರೀಕ್ಷೆಗೆ (ಪ್ರತಿ ಸೆಮಿಸ್ಟರ್ ಪ್ರತ್ಯೇಕವಾಗಿ) | ರೂ. 230/- | ರೂ. 125/- | **ರೂ. 355/-** |

## : ವಿಶೇಷ ಸೂಚನೆ :

**2008-09ನೇ ಮತ್ತು ಅದಕ್ಕಿಂತಲೂ ಹಿಂದಿನ ಸಾಲಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ (ನೋಂದಣಿ ಸಂಖ್ಯೆ 06 ರಿಂದ 08 ರವರೆಗೆ ಪ್ರಾರಂಭವಾಗುವ ವಿದ್ಯಾರ್ಥಿಗಳಿಗೆ) ಪರೀಕ್ಷೆ ತೆಗೆದುಕೊಳ್ಳುವ ಅವಕಾಶವಿರುವುದಿಲ್ಲ.**

ಪು. ತಿ. ನೋ.

ವಿದ್ಯಾರ್ಥಿಗಳಿಗೆ ಸೂಚನೆ :

1. ವಿದ್ಯಾರ್ಥಿಗಳು (Online) **ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು** student.logisys.net.in/ssc ನಲ್ಲಿ login ಆಗಿ ನೊಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿದ ನಂತರ ಶುಲ್ಕದ ವಿವರಗಳ್ಳುಳ ಅರ್ಜಿ ಮುದ್ರಿಸಿ ಬ್ಯಾಂಕಿನಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ಕಾಲೇಜಿನ ಕಛೇರಿಯ ಸಂಬಂಧಿಸಿದ ವಿಷಯನಿರ್ವಾಹಕರಿಗೆ ಸಲ್ಲಿಸಬೇಕು.
2. ನಿಗದಿತ ಶುಲ್ಕವನ್ನು (ಮುದ್ರಿತ ಚಲನ್‌ನಲ್ಲಿರುವಂತೆ) **ಆನ್‌ಲೈನ್** ಚಲನ್‌ನೊಂದಿಗೆ ಯಾವುದೇ ಕೆನರಾ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ 0872101013100 ಶಾಖೆಯ ಕೋಡ್ ಸಂಖ್ಯೆ:000872, IFSC CODE : CNRB0000872ಗೆ ನೇರವಾಗಿ ಪಾವತಿಸುವುದು

   **ಅಥವಾ**

   ಬೇರೆಯಾವುದೇ ಬ್ಯಾಂಕಿನ ಮೂಲಕ ಶುಲ್ಕವನ್ನು ಪಾವತಿಸುವ ವಿದ್ಯಾರ್ಥಿಗಳು ನಮೂದಿತ NEFT ಚಲನ್ ನೊಂದಿಗೆ ಪಾವತಿಸಬಹುದು.
3. ರೂ.2ಲಕ್ಷ ಅಥವಾ ಅದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ FRESHERS ವಿದ್ಯಾರ್ಥಿಗಳಿಗೆ ಮಾತ್ರ ನಿಯಮಾನುಸಾರ ಶುಲ್ಕ ವಿನಾಯಿತಿ ಇರುತ್ತದೆ. ಆದರೆ ಅಂತಹ ವಿದ್ಯಾರ್ಥಿಗಳು ಅಂಕಪಟ್ಟಿ ಶುಲ್ಕ ರೂ.125–00ನ್ನು ಪಾವತಿಸಬೇಕು ಹಾಗೂ ಸದರಿ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಮಂಜೂರಾಗುವ ವಿದ್ಯಾರ್ಥಿ ವೇತನದಲ್ಲಿ ಪರೀಕ್ಷಾ ಶುಲ್ಕವನ್ನು ಕಟಾವಣೆ ಮಾಡಿ ಪರೀಕ್ಷಾ ಖಾತೆಗೆ ಜಮಾ ಮಾಡುವಂತೆ ಸೂಚಿಸಿ ಮಾಹಿತಿಯನ್ನು ಪ್ರಾಂಶುಪಾಲರಿಗೆ ತಿಳಿಸುವುದು.

   ಪ್ರವರ್ಗ–1 ಮತ್ತು ಕುಟುಂಬದ ವಾರ್ಷಿಕ ಆದಾಯ **ರೂ.44,500=00** ಅಥವಾ ಇದಕ್ಕಿಂತ ಕಡಿಮೆ ಹೊಂದಿರುವ 2ಎ,2ಬಿ,3ಎ,3ಬಿ ಹಾಗೂ ಇತರೆ FRESHERS ವಿದ್ಯಾರ್ಥಿಗಳು ಪೂರ್ಣಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆದರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ NEFT/RTGS ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ: ಸ.ಕಾ.ಇ./201/ಬಿ.ಎಂ.ಎಸ್/2011 ಬೆಂಗಳೂರು ದಿನಾಂಕ: 23–06–2012ರಲ್ಲಿ ತಿಳಿಸಿರುತ್ತಾರೆ.

   **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಮೇಲ್ಕಂಡ ವರ್ಗಗಳ ಮರುಯತ್ನದ (REPEATERS)ವಿದ್ಯಾರ್ಥಿಗಳಿಗೆ ಹಾಗೂ ರೂ.500=00ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ.**

   ಶುಲ್ಕ ವಿನಾಯಿತಿ ಬಯಸುವ ಎಲ್ಲಾ ವಿದ್ಯಾರ್ಥಿಗಳು ಸಕ್ಷಮ ಅಧಿಕಾರಿಗಳಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಕಾಲೇಜಿಗೆ ತಮ್ಮ ಮುದ್ರಿತ ಪರೀಕ್ಷಾ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

4. **ಈಗಾಗಲೇ ಮರು ಮೌಲ್ಯಮಾಪನ/ಸವಾಲಿನ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳೂ ಕೂಡಾ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು.**

5. **ಯಾವುದಾದರೂ ತಾಂತ್ರಿಕ ಕಾರಣದಿಂದ ಬ್ಯಾಂಕುಗಳಲ್ಲಿ ಶುಲ್ಕವನ್ನು ಪಾವತಿ ಮಾಡಲು ಸಾದ್ಯವಾಗದಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಗಳನ್ನು Online ನಲ್ಲಿ ಭರ್ತಿಮಾಡಿದ ನಂತರ ಚಲನ್‌ನಲ್ಲಿ ನಮೂದಾಗಿರುವ ಶುಲ್ಕವನ್ನು ಮುದ್ರಿತ ಚಲನ್‌ನೊಂದಿಗೆ ಕಾಲೇಜಿನಲ್ಲಿಯೇ ಪಾವತಿಸುವುದು.**

6. **ವಿದ್ಯಾರ್ಥಿಗಳು ಪರೀಕ್ಷೆಗೆ ಕಟ್ಟುವ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡುವುದಿಲ್ಲ.**

7. **ಪ್ರಥಮ ಸೆಮಿಸ್ಟರ್‌ನ ಎಲ್ಲಾಪದವಿಯ ವಿದ್ಯಾರ್ಥಿಗಳಿಗೆ ನೋಂದಣಿಸಂಖ್ಯೆಗಳನ್ನು** www.sahyadriscience college.org **ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

**ಪರೀಕ್ಷಾ ನಿಯಂತ್ರಣಾಧಿಕಾರಿಗಳು**

**ಗೆ :–**

01) ಪ್ರಾಚಾರ್ಯರು, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಶಿವಮೊಗ್ಗ.
02) ಆಪ್ತ ಕಾರ್ಯಾಲಯ:– ಕುಲಪತಿಗಳು / ಕುಲಸಚಿವರು / ಹಣಕಾಸು ಅಧಿಕಾರಿಗಳು / ಕುಲಸಚಿವರು(ಪ), ಕು ವಿ ವಿ, ಶಂಕರಘಟ್ಟ.
03) ಸಹಾಯಕ ಕುಲಸಚಿವರು ಸಹ್ಯಾದ್ರಿ ವಿಜ್ಞಾನ ಕಾಲೇಜು(ಸ್ವಾಯತ್ತ), ಶಿವಮೊಗ್ಗ.
04) ಅಧೀಕ್ಷಕರು:– ಸಿಬ್ಬಂದಿ ವಿಭಾಗ / ಲೆಕ್ಕ ಶಾಖೆ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾ), ಶಿವಮೊಗ್ಗ
05) ವಿಷಯ ನಿರ್ವಾಹಕರು:– ಪರೀಕ್ಷೆ/ಕ್ಯಾಷ್ ಕೌಂಟರ್/ಸ್ಟೇಷನರಿ, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ), ಶಿವಮೊಗ್ಗ. – **ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.**
06 ಕಛೇರಿ ಪ್ರತಿ.

| | ವಿಭಾಗದ ಮುಖ್ಯಸ್ಥರು/ಪ್ರಾಚಾರ್ಯರಿಗೆ ಸೂಚನೆ: |
|---|---|
| 1. | ವಿದ್ಯಾರ್ಥಿಗಳು Online ಅಥವಾ NEFT/RTGS ಮುಖಾಂತರ ಪಾವತಿಸಿ ಸಲ್ಲಿಸಿದ ಚಲನ್‌ನ್ನು ಪರಿಶೀಲಿಸಿ ದೃಢೀಕರಿಸಬೇಕು. |
| 2. | ನಿಯಮಾನುಸಾರ ಅರ್ಹರಾದ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಿಸಬೇಕು. ವಿಶ್ವವಿದ್ಯಾಲಯದ ನಿಯಮಾನುಸಾರ ವಿದ್ಯಾರ್ಥಿಗಳ ಹಾಜರಾತಿಯನ್ನು ಕಡ್ಡಾಯವಾಗಿ ಖಚಿತ ಪಡಿಸಿಕೊಂಡು ದೃಢೀಕರಿಸಬೇಕು. |
| 3. | ನಿಗದಿತ ಶುಲ್ಕವನ್ನು ಕಡ್ಡಾಯವಾಗಿ Online ಅಥವಾ NEFT/RTGS ಮೂಲಕ ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ, ಇವರ ಹೆಸರಿನಲ್ಲಿ ಕೆನರಾ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ 0872101013100 ಶಾಖೆಯ ಕೋಡ್ ಸಂಖ್ಯೆ:000872, IFSC CODE : CNRB0000872ಗೆ, ನೇರವಾಗಿ ಪಾವತಿಸಿ ಹುಂಡಿಯ ಪ್ರತಿಯನ್ನು ಸಲ್ಲಿಸಬೇಕು. (ವಿದ್ಯಾರ್ಥಿಗಳು Online ಮುಖಾಂತರ ಹಣಪಾವತಿಸಲು ಬ್ಯಾಂಕ್ ಲಭ್ಯತೆ ಇಲ್ಲದ ಪಕ್ಷದಲ್ಲಿ ಕಾಲೇಜಿನಲ್ಲಿಯೇ ಶುಲ್ಕವನ್ನು ಪಡೆದು ಶುಲ್ಕಪಾವತಿಸಿದ ವಿದ್ಯಾರ್ಥಿಯ ಪೂರ್ಣ ವಿವರದೊಡನೆ ಪರೀಕ್ಷಾ ನಿಯಂತ್ರಾಣಾಧಿಕಾರಿಗಳಿಗೆ ಮಾಹಿತಿ ನೀಡುವುದು.) |
| 4. | ಅಂತರಿಕ ಅಂಕಗಳನ್ನು ಕಡ್ಡಾಯವಾಗಿ Online ಮೂಲಕವೇ ನಮೂದಿಸಬೇಕು ಹಾಗೂ ಅಂತರಿಕ ಅಂಕದ ಮುಂದೆ ವಿದ್ಯಾರ್ಥಿಗಳಿಂದ ಸಹಿ ಪಡೆದು ಪ್ರಾಂಶುಪಾಲರಿಂದ ದೃಢೀಕೃತಗೊಂಡ Hard Copyಯನ್ನು ದಿನಾಂಕ:27-11-2014 ರೊಳಗಾಗಿ ಕಡ್ಡಾಯವಾಗಿ ಪರೀಕ್ಷಾ ನಿಯಂತ್ರಾಣಾಧಿಕಾರಿಗಳ ಕಛೇರಿಗೆ ಸಲ್ಲಿಸತಕ್ಕದ್ದು. |
| 5. | ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿರುವಂತಹ (ಕಾಲೇಜು ಮತ್ತು ವಿಶ್ವವಿದ್ಯಾನಿಲಯವನ್ನು ಪ್ರತಿ ನಿಧಿಸುವ) ವಿಭಾಗ/ಕಾಲೇಜುಗಳಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡ ನಿಗದಿತ ಸಮಯದೊಳಗೆ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಂತೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು/ಪ್ರಾಂಶುಪಾಲರು ನಿಗಾವಹಿಸತಕ್ಕದ್ದು. ಅಂತರಿಕ ಪರೀಕ್ಷೆ ಬರೆದ (Blue Book) ಉತ್ತರ ಪತ್ರಿಕೆಗಳನ್ನು ಕೋ-ಆರ್ಡಿನೇಟರ್ ರವರಿಗೆ ಮೇಲ್ಕಂಡ ದಿನಾಂಕದೊಳಗೆ ಸಲ್ಲಿಸುವುದು. |
| 6. | ಕಡೆ ದಿನಾಂಕದ ನಂತರ ಪರೀಕ್ಷಾ ವಿಷಯನಿರ್ವಾಹಕರು ಪ್ರತಿ ವಿದ್ಯಾರ್ಥಿಯ ಪರೀಕ್ಷಾ ಶುಲ್ಕಗಳನ್ನು/ಅರ್ಜಿಗಳನ್ನು ಪರಿಶೀಲಿಸಿ ಶುಲ್ಕ ಪಾವತಿ ಸಮರ್ಪಕವಾಗಿ ಇರುವುದು ಕಂಡು ಬರದೆ ಇರುವ ಪಕ್ಷದಲ್ಲಿ ಆ ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರವನ್ನು ನೀಡಬಾರದು. |
| 7. | **ವಿದ್ಯಾರ್ಥಿಗಳು ತಮ್ಮ ಅಂತರಿಕ ಅಂಕಗಳನ್ನು Online Entry ಪ್ರತಿಯಲ್ಲಿ ಸರಿಯಿದೆಯೇ ಎಂದು ಪರಿಶೀಲಿಸಿ ಸಹಿ ಹಾಕುವುದು ನಿಗದಿಪಡಿಸಿದ ದಿನಾಂಕದ ನಂತರ ಬರುವ ಮನವಿಗಳಿಗೆ ಮನ್ನಣೆ ನೀಡಲಾಗುವುದಿಲ್ಲ. ಇದಕ್ಕೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರೇ ಹೊಣೆಗಾರರಾಗಿರುತ್ತಾರೆ.** |